ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 4, September-October 2024, Pp.49-55
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ವಚನ ಸಾಹಿತ್ಯದಲ್ಲಿ ಪ್ರಕೃತಿ–ಪ್ರಾಣಿ–ಪಕ್ಷಿ ರೂಪಕಗಳು

**ಡಾ. ಪುಷ್ಪಾ ಬಸನಗೌಡರ**
ಸಹ ಪ್ರಾಧ್ಯಾಪಕರು, ಮಹಾಂತ ಮಹಾವಿದ್ಯಾಲಯ ,ರಾಯಪುರ, ಧಾರವಾಡ.

***Abstract:***
*ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ 12ನೇ ಶತಮಾನದಲ್ಲಿ ರಚನೆಯಾದ ವಚನ ಸಾಹಿತ್ಯ ಕನ್ನಡ ಸಾಹಿತ್ಯ ವಿಶ್ವ ಸಾಹಿತ್ಯಕ್ಕೆ ಕೊಟ್ಟ ಬಹುದೊಡ್ಡ ಕೊಡುಗೆಯೇ ಸರಿ. ಸಮಾಜದ ಸುಧಾರಣೆಗಾಗಿ ಶರಣರು ಕೈಗೊಂಡ ಸಮಾಜೋ–ಧಾರ್ಮಿಕ ಚಳವಳಿ ಸಮಾಜದಲ್ಲಿಯೇ ರೋಗಗ್ರಸ್ತ ಅಸಮಾನತೆಯನ್ನು ಕಿತ್ತೊಗೆದು ಜನರಲ್ಲಿ ವಿವೇಕ ಪ್ರಜ್ಞೆ ಮೂಡಿಸುವುದು. ವರ್ಗ ವರ್ಣ ಲಿಂಗ ಸಮಾನತೆಯನ್ನು ಮೂಡಿಸುವುದು, ಕಾಯಕ ದಾಸೋಹ ಪದ್ಧತಿ, ಏಕದೇವೋಪಾಸನೆ, ಸ್ತ್ರೀ ಸ್ವಾತಂತ್ರ್ಯ ಮೊದಲಾದ ಜೀವಪರ ಮೌಲ್ಯಗಳನ್ನು ಬಿತ್ತಿ ಬೆಳೆಸಬೇಕೆಂಬ ಧೋರಣೆ ವಚನ ಸಾಹಿತ್ಯದ್ದು. ಸಮಾಜದ ಎಲ್ಲ ವರ್ಗದ ಜನರನ್ನು ಸಾಹಿತ್ಯ ರಚನೆಗೆ ತೊಡಗಿಸಿದ ಪರ್ವ ಕಾಲವೇ ವಚನ ಸಾಹಿತ್ಯದ ರಚನಾ ಕಾಲ. ಸಕಲ ಜೀವಾತ್ಮರಿಗೂ ಲೇಸನ್ನೇ ಬಯಸುವ ಮಹದಾಸೆ ಶರಣರಿಗೆ, ಆಡುನುಡಿಗೆ ಮಹತ್ವ ನೀಡುವ ಮೂಲಕ ವಚನ ಸಾಹಿತ್ಯ ಶ್ರೇಷ್ಠತೆಯ ಸ್ಥಾನ ಪಡೆದಿದೆ. ಪ್ರಸ್ತುತ ಲೇಖನದಲ್ಲಿ ವಚನ ಸಾಹಿತ್ಯದಲ್ಲಿ ಕಂಡುಬರುವ ಪ್ರಕೃತಿ–ಪ್ರಾಣಿ–ಪಕ್ಷಿ ರೂಪಕಗಳನ್ನು ಅಧ್ಯಯನ ಮಾಡಲಾಗಿದೆ.*

***Keywords:*** *ಕನ್ನಡ ಸಾಹಿತ್ಯ, ವಚನ ಸಾಹಿತ್ಯ, ಪ್ರಕೃತಿ ರೂಪಕಗಳು.*

**ಪೀಠಿಕೆ**

ವಚನ ಸಾಹಿತ್ಯದ ಶ್ರೇಷ್ಠತೆಗೆ ಪ್ರಮುಖ ಕಾರಣಗಳಲ್ಲಿ "ಭಾಷೆ" ಮಹತ್ವದ ಸ್ಥಾನ ಪಡೆಯುತ್ತದೆ. ವಚನ ಭಾಷೆಯು ಸಂಪದ್ಭರಿತವಾಗಿದ್ದರೆ ಸತ್ವಯುತವಾಗಿದ್ದರೆ ಅದಕ್ಕೆ ಶರಣರು ಬಳಸಿದ ದೇಸಿ ನುಡಿಗಳು, ಬಳಕೆ ಮಾತುಗಳು, ಉಪಮೆ, ರೂಪಕ, ದೃಷ್ಟಾಂತಗಳ ಬಳಕೆಯೇ ಕಾರಣವಾಗಿದೆ ಏಕೆಂದರೆ ಶರಣರು ವ್ಯಾಕರಣದ ಬಂಧವನ್ನು ಸಡಿಲಿಸಿ ಪಾರಂಪರಿಕವಾಗಿ ಸಾಗಿಬಂದ ಸಂಸ್ಕೃತಭೂಯಿಷ್ಠ ಚಂಪೂ ಶೈಲಿಯನ್ನು ಕಿತ್ತೊಗೆದು ದೇಸಿಶೈಲಿಯ ವಚನ ಸಾಹಿತ್ಯವನ್ನು ರಚಿಸಿದ್ದಾರೆ. ಈ ಮೂಲಕ ಭಾಷಾ ದೃಷ್ಟಿಯಲ್ಲಿ ಅದ್ಭುತ ಕ್ರಾಂತಿಯನ್ನೇ ಮೆರೆದಿದ್ದಾರೆ. ನಡುಗನ್ನಡದ ಆಡುಭಾಷೆಯನ್ನೇ ವಚನಗಳಿಗೆ ಸಮರ್ಥವಾಗಿ ಬಳಸಿಕೊಂಡು ಜನತೆಯ ನಾಲಿಗೆಯ ಮೇಲೆ ನಲಿಯುತ್ತಿದ್ದ ನಿತ್ಯ ಬಳಕೆಯ ಪದಗಳನ್ನೇ ತಮ್ಮ ಸುತ್ತಮುತ್ತಲಿನ ಪರಿಸರದ ಅನುಭವವನ್ನು ತಮ್ಮ ವಚನಗಳಲ್ಲಿ ಅಭಿವ್ಯಕ್ತಿ ಮಾಧ್ಯಮವಾಗಿ ಬಳಸಿಕೊಂಡಿದ್ದಾರೆ. ಹೀಗೆ ಶರಣರು ಹದವರಿತುಕೊಂಡು ಬಳಸಿದ ಭಾಷೆಯೇ ಅವರ ವಚನಗಳ ಜನಪ್ರಿಯತೆಗೆ ಕಾರಣವೆನ್ನಬಹುದು.

ರಸ ಧ್ವನಿಗಳು ಕಾವ್ಯದ ಆತ್ಮವೆಂದು ಹೇಳಲಾಗುತ್ತದೆ. ಅಂತೆಯೇ ಉಪಮೆ ರೂಪಕಗಳು ಕಾವ್ಯದ ಅರ್ಥರಮ್ಯತೆಯನ್ನು ಹೆಚ್ಚಿಸುತವೆ. ಹೀಗಾಗಿ ಶರಣರು ಪ್ರಕೃತಿ–ಪ್ರಾಣಿ–ಪಕ್ಷಿಗಳ ರೂಪಕಗಳನ್ನು

**Please cite this article as:** ಪುಷ್ಪಾ ಬಸನಗೌಡರ. (2024). ವಚನ ಸಾಹಿತ್ಯದಲ್ಲಿ ಪ್ರಕೃತಿ–ಪ್ರಾಣಿ–ಪಕ್ಷಿ ರೂಪಕಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 3(4), 49–55

ಬಳಸುವ ಮೂಲಕ ತಮ್ಮ ಭಾವಾಭಿವ್ಯಕ್ತಿಯನ್ನು ಎತ್ತಿ ತೋರಿಸಿದ್ದಾರೆ. ವಿಶಿಷ್ಟ ಸಂದರ್ಭಗಳಲ್ಲಿ ವಿಶಿಷ್ಟ ವಿಷಯದ ಸೊಗಸು ಹೊರಹೊಮ್ಮಲು ಸಾಧ್ಯವಾಗಿಸಿಕೊಂಡಿದ್ದಾರೆ. ಹೀಗೆ ವಚನ ಸಾಹಿತ್ಯ ಕೇವಲ ಒಂದು ವಸ್ತುವನ್ನು ಒಳಗೊಂಡ ಬರಹವಲ್ಲ ಕೇವಲ ಒಂದು ಪ್ರಕಾರವೂ ಅಲ್ಲ, ಶರಣರ ಅಮೂಲ್ಯ ವಿಚಾರಗಳು ಸೂಕ್ಷ್ಮಾಣು ಭಾವಗಳು ಅಭಿವ್ಯಕ್ತಗೊಂಡ ಸಾಹಿತ್ಯ ರೂಪ.

ಪ್ರಕೃತಿಯ ವಿಸ್ಮಯ ಶರಣರಿಗೆ ಆಶ್ಚರ್ಯವೆನಿಸಿದೆ ಪ್ರಕೃತಿಯ ವ್ಯಾಪಾರಗಳನ್ನು ವೈಶಿಷ್ಟ್ಯಗಳನ್ನು ಸೃಷ್ಟಿ ಶಕ್ತಿಯ ಸಾಮರ್ಥ್ಯವನ್ನು ಅನೇಕ ರೂಪಕಗಳ ಮೂಲಕ ತೆರೆದು ತೋರಿಸಿದ್ದಾರೆ. ಪ್ರಕೃತಿಯಂತೆಯೇ ಪ್ರಾಣಿ ಪಕ್ಷಿಗಳ ರೂಪಕಗಳನ್ನು ಬಹಳ ಪ್ರಜ್ಞಾಪೂರ್ವಕವಾಗಿ ಬಳಸಿಕೊಂಡಿದ್ದಾರೆ. ಮುಖ್ಯವಾಗಿ ಕಪ್ಪೆ, ಸರ್ಪ, ನಾಯಿ, ನರಿ, ಕರಿ, ಕುರಿ, ಕತ್ತೆ, ಕೋಳಿ, ಕೋಡಗ, ಬೆಕ್ಕು, ಪಶು, ಗೂಬೆ, ಓತಿಕಾಟ, ಗೋಸುಂಬೆ ಇವೆಲ್ಲವುಗಳನ್ನು ರೂಪಕಗಳಾಗಿ ಬಳಸುವುದರಿಂದ ತಮ್ಮ ಅನುಭವಾಭಿವ್ಯಕ್ತಿಯನ್ನು ಸುಂದರಗೊಳಿಸಿದ್ದಾರೆ. ವಿಚಾರವನ್ನು ಚುರುಕುಗೊಳಿಸಿದ್ದಾರೆ. ಜನರ ಅಜ್ಞಾನ ಬುದ್ದಿಗೇಡಿತನಗಳನ್ನು ಬಯಲಿಗೆಳೆದಿದ್ದಾರೆ. ನಾಯಿ–ಹಂದಿಗಳನ್ನು ಹೀನತನಕ್ಕೆ ಹೋಲಿಸಿದರೆ, ಆಡು ಅಜ್ಞಾನಕ್ಕೆ ಮರ್ಕಟ, ಓತಿಕಾಟ ಗೋಸುಂಬೆ ಬಾವುಲಿಗಳನ್ನು ಮನಸ್ಸಿನ ಚಂಚಲತೆಗೆ ಬಳಸಿಕೊಂಡಿರುವರು. ಪಶು ಮುಗ್ಧತೆಗೆ, ಗಿಳಿ–ನವಿಲು ಮುಂತಾದವು ಸಹಜವಾಗಿ ಆಕರ್ಷಣೀಯವಾದ ಕಾರ್ಯವನ್ನು ಮಾಡಿದರೂ ಸಾಧನಾ ಪೂರ್ವಕವಾಗಿ, ಪ್ರಜ್ಞಾ ಪೂರ್ವಕವಾಗಿ ಕಾರ್ಯವೆಸಗುವ ಸಂಕೇತಗಳಾಗಿವೆ. ಚಂದ್ರ–ಅಂಬುದಿ, ಮಾಮರ– ಕೋಗಿಲೆ, ಚಕೋರ–ಚಂದ್ರಮ, ಅಂಬುಜ– ಬಾನು, ಪರಿಮಳ– ದುಂಬಿ ಈ ಜೋಡಿಗಳು ಮಧುರ ಬಾಂಧವ್ಯದ ಸಂಕೇತಗಳಾಗಿವೆ. ಕಾಗೆ–ಕೋಳಿ ಮುಂತಾದವುಗಳು ತನ್ನ ಸುಖವನ್ನು ಇತರರೊಂದಿಗೆ ಹಂಚಿಕೊಳ್ಳುವ ಸಮಾನತೆಯ ಮನೋಭಾವವನ್ನು ಪ್ರತಿನಿಧಿಸುತ್ತವೆ. ಸರ್ಪ ಮನಸ್ಸು, ಮನಸೇ ಸರ್ಪ. ದೇಹವೇ ಅದರ ವಾಸಸ್ಥಾನ. ಮನದಲ್ಲಿರುವ ವಿಷ, ವಿಷಯ ವ್ಯಾಮೋಹ ಸಿಟ್ಟು ದ್ವೇಷ ,ಕಾಮ ಇವೆಲ್ಲ ದುರ್ಗುಣಗಳ ಸಂಕೇತವೇ ಸರ್ಪ. ಯಾವತ್ತೂ ಮೋಹ, ಮದ, ಮತ್ಸರ, ಲೋಭಗಳ ನಂಜನ್ನು ಕಾರುತ್ತಲೇ ಇರುತ್ತದೆ.

**ಶರಣರು ಬಳಸಿದ ರೂಪಕಗಳನ್ನು ಹೀಗೆ ವರ್ಗೀಕರಿಸಬಹುದು**

- ಶರಣರು ಬಳಸಿದ ಪ್ರಕೃತಿಯ ರೂಪಕಗಳು
- ಮನುಷ್ಯರ ಮನಸ್ಸಿನ ಚಂಚಲತೆಗೆ ಬಳಸಿದ ಪ್ರಾಣಿ–ಪಕ್ಷಿ ರೂಪಕಗಳು
- ಮಾನವರ ಬೂಟಾಟಿಕೆ– ಡಂಭಾಚಾರ–ವ್ಯರ್ಥ ಪ್ರಯತ್ನಕ್ಕೆ ಬಳಸಿದ ರೂಪಕಗಳು
- ಗಾದೆಗಳ ಬಳಸುವಿಕೆಯಲ್ಲಿ ಬಳಸಿದ ರೂಪಕಗಳು

**ಶರಣರು ಬಳಸಿದ ಪ್ರಕೃತಿಯ ರೂಪಕಗಳು**

ಪ್ರಕೃತಿಯ ಆಕರ್ಷಣೆಗಳಾದ ನೆಲ, ಜಲ, ಆಗಸ, ಇರುಳು, ಹಗಲು ಇವುಗಳೆಲ್ಲ ಮನಸ್ಸಿಗೆ ಆಶ್ಚರ್ಯ ಅದ್ಭುತಗಳ ಜೊತೆ ಆನಂದವನ್ನುಂಟು ಮಾಡಿದರೆ, ಮಂದಹಾಸವಿರುವ ಮಲ್ಲಿಗೆಯ ಪರಿಮಳ, ಚಂದನದ ಸುಗಂಧ, ಗಿಡ–ಮರ ಬಳ್ಳಿಗಳು, ಕಲ್ಪವೃಕ್ಷಗಳು, ಸಮುದ್ರ ಪರ್ವತಗಳು, ಪ್ರಕೃತಿಯ ವೈಶಿಷ್ಟ್ಯಗಳೆನಿಸಿವೆ. ಪ್ರಕೃತಿಯನ್ನು ನೋಡುವ ಶರಣರ ದೃಷ್ಟಿಯಲ್ಲಿ ಆಧ್ಯಾತ್ಮಿಕತೆಯೊಂದಿಗೆ ವೈಜ್ಞಾನಿಕ ಹಾಗೂ ವೈಚಾರಿಕ ಅಂಶಗಳು ಮೇಳೈಸಿಕೊಂಡಿವೆ.

ಕನ್ನಡದ ಮೊದಲ ಕವಿಯತ್ರಿ ಅಕ್ಕಮಹಾದೇವಿಯ ಹಲವಾರು ವಚನಗಳಲ್ಲಿ ಪ್ರಕೃತಿಯ ಸೊಬಗು ಹೀಗೆ ಮೂಡಿ ಬಂದಿದೆ

***ಈಳೆ ನಿಂಬೆ ಮಾವು ಮಾದಲಕ್ಕೆ ಹುಳಿ ನೀರೆರೆದವರಾರಯ್ಯ***
***ಕಬ್ಬು ಬಾಳೆ ಹಲಸು ನಾರಿ ಕೇಳಕ್ಕೆ ಸಿಹಿ ನೀರೆರೆದವರಾರಯ್ಯ***

***ಕಳವೆ ಶಾಲ್ಯನ್ನಕ್ಕೆ ಓಗರದ ಉದಕವ ನೆರೆದವರಾರಯ್ಯ***
***ಮರುಗ ಮಲ್ಲಿಗೆ ಪಚ್ಚೆಗೆ ಪರಿಮಳ ದುದಕವನೆರೆದವರಾರಯ್ಯ?***

ಇಲ್ಲಿ ಅಕ್ಕನ ಅನ್ವೇಷಕ ಬುದ್ಧಿ ಮಾತ್ರವಲ್ಲ ಸೃಷ್ಟಿಯ ರಹಸ್ಯ ಮತ್ತು ಸತ್ಯವನ್ನು ಬಯಲು ಮಾಡುವ ವೈಚಾರಿಕ ಮನೋಭಾವ ವ್ಯಕ್ತವಾಗಿದೆ.

ಅಳಿಸಂಕುಳವೆ, ಮಾಮರವೇ, ಬೆಳದಿಂಗಳೇ, ಕೋಗಿಲೆಯೇ ನಿಮ್ಮೆಲ್ಲರನ್ನು ಒಂದಾಗಿ ಬೇಡುವೆ ಎನ್ನೊಡೆಯ ಚೆನ್ನಮಲ್ಲಿಕಾರ್ಜುನನ ಕಂಡೊಡೆ ಕರೆದು ತೋರಿರೆ ಎನ್ನುವಲ್ಲಿ ಪ್ರಕೃತಿಯ ವಸ್ತುಗಳನ್ನು ಕುರಿತು ತನ್ನ ಅಂತರಂಗದ ಚೆನ್ನಮಲ್ಲಿಕಾರ್ಜುನನ ಬಗೆಗಿರುವ ಭಾವನೆಯನ್ನು ತೋರ್ಪಡಿಸುತ್ತಾಳೆ. ಸೃಷ್ಟಿಯ ವೈಚಿತ್ರ್ಯಕ್ಕೆ ಶರಣರು ಬೆರಗಾಗಿದ್ದಾರೆ. ಶರಣರ ವಿಸ್ಮಯವೇ ವಚನಗಳಾಗಿವೆ. ಸೃಷ್ಟಿಯ ಸಾಮರ್ಥ್ಯ ಸೃಷ್ಟಿಯ ರಹಸ್ಯಗಳನ್ನು ಹೀಗೆ ವಿಶ್ಲೇಷಿಸುತ್ತಾರೆ.

***ಮರದೊಳಗೆ ಮಂದಾಗ್ನಿಯ ಉರಿಯದಂತಿರಿಸಿದೆ.***
***ನೊರೆವಾಲೊಳಗೆ ತುಪ್ಪವ ಕಂಪಿಲ್ಲದಂತಿರಿಸಿದೆ.***
***ಶರೀರದೊಳಗಾತ್ಮನನಾರೂ ಕಾಣದಂತಿರಿಸಿದೆ***
***ನೀನು ಬೆರೆಸಿದ ಭೇದಕ್ಕೆ ಬೆರಗಾದೆನಯ್ಯ ರಾಮನಾಥ***

ಎಂದು ಸೃಷ್ಟಿಯಲ್ಲಿ ಪರಸ್ಪರ ಭಿನ್ನವಾದ ಎರಡು ವಿಷಯಗಳು ಒಂದರಲ್ಲಿ ಮತ್ತೊಂದು ಹುದುಗಿರುವಂತೆ ಶರೀರದಲ್ಲಿ ಆತ್ಮವಿದೆ ಎನ್ನುತ್ತಾರೆ. ಶಿವ ಹಾಗೂ ಭಕ್ತನ ಸಂಬಂಧವನ್ನು ಅಲ್ಲಮಪ್ರಭುಗಳು ಹೀಗೆ ವಿವರಿಸುತ್ತಾರೆ.

***ಎತ್ತಣ ಮಾಮರ ಎತ್ತಣ ಕೋಗಿಲೆ ಎತ್ತಣಿದೆಂತ್ತ ಸಂಬಂಧವಯ್ಯ***
***ಬೆಟ್ಟದ ನೆಲ್ಲಿಕಾಯಿ ಸಮುದ್ರದೊಳಗಣ ಉಪ್ಪು, ಎತ್ತಣಿಂದೆತ್ತ ಸಂಬಂಧವಯ್ಯ***

ಎನ್ನುವಲ್ಲಿ ಎರಡು ವಸ್ತುಗಳ ಸಂಬಂಧ ಆಕಸ್ಮಿಕವಾದರೂ ಒಂದು ಸ್ಥಿರವಾದದು ಮತ್ತೊಂದು ಚಲನಶೀಲವಾದದ್ದು. ಒಂದು ಇನ್ನೊಂದಕ್ಕೆ ಆಶ್ರಯ ನೀಡುವಂತಹದು. ಬೆಟ್ಟದ ನೆಲ್ಲಿಕಾಯಿ ಸಮುದ್ರದ ಉಪ್ಪುಗಳ ಸಂಬಂಧ ಒಂದರೊಡನೊಂದು ಬೆರೆತು ರುಚಿಯನ್ನು ಉಂಟುಮಾಡುವುದು ಹಾಗೆಯೇ ತನ್ನ ಮತ್ತು ಗುಹೇಶ್ವರನ ಸಂಬಂಧ ಸ್ಥಿರವಾದರೂ, ನಮ್ಮಿಬ್ಬರ ಸತ್ವದಲ್ಲಿ ಮಹದಂತರವುಂಟು ಎನ್ನುವ ಮೂಲಕ ವಿಧೇಯರೆನಿಸಿದ್ದಾರೆ.

ನಿರಾಕಾರ, ನಿರ್ಗೋಚರ ,ಶಿವ– ಪರಮಾತ್ಮ ಪ್ರತಿಯೊಬ್ಬ ಜೀವಾತ್ಮನಲ್ಲಿ ಅಷ್ಟೇ ಅಲ್ಲ ಸೃಷ್ಟಿಯ ಕಣಕಣದಲ್ಲೂ ನೆಲೆಸಿರುವ ಎಂಬ ನಂಬಿಕೆ ಶರಣರದು. ಹೀಗಾಗಿ ಶಿವನ ಇರುವಿಕೆಯನ್ನು ಪ್ರಕೃತಿಯ ಈ ಅಂಶಗಳಲ್ಲಿ ಕಾಣುತ್ತಾರೆ.

***ನೆಲದ ಮರೆಯ ನಿಧಾನದಂತೆ***
***ಫಲದ ಮರೆಯ ರುಚಿಯಂತೆ***
***ಶಿಲೆಯ ಮರೆಯ ಹೇಮದಂತೆ***
***ತಿಲದ ಮರೆಯ ತೈಲದಂತೆ***
***ಮರದ ಮರೆಯ ತೇಜದಂತೆ***
***ಭಾವದ ಮರೆಯ ಬ್ರಹ್ಮವಾಗಿಪ್ಪ***
***ಚನ್ನಮಲ್ಲಿಕಾರ್ಜುನನ ನಿಲುವ ನರಿಯಬಾರದು.***

ಎಂಬಲ್ಲಿ ಅಕ್ಕ ಭಗವಂತನ ಸ್ವರೂಪವನ್ನು ಸಾಮಾನ್ಯರ ಅನುಭವಕ್ಕೆ ತಕ್ಕಂತೆ ನೆಲ– ನಿಧಾನ, ಫಲ ರುಚಿ, ಶಿಲೆ– ಹೇಮ, ತಿಲ – ತೈಲ, ಮರ– ತೇಜ ಮೊದಲಾದ ಪರಸ್ಪರ ಸಂಬಂಧಿತ ಪರಿಚಿತ ಶಬ್ದಗಳ ಮೂಲಕ ಭಗವಂತನನ್ನು ಸಾಕ್ಷಾತ್ಕರಿಸಿದ್ದಾಳೆ. ಇದನ್ನೇ ಬಸವಣ್ಣನವರ ವಚನದಲ್ಲಿ ಹೀಗೆ ಕಾಣುತ್ತೇವೆ.

***ಉದಕದೊಳಗೆ ಬೈಚಿಟ್ಟ ಬಯಕೆಯ ಕಿಚ್ಚಿನಂತಿದ್ದಿತು***
***ಸಸಿಯೊಳಗಣ ರಸದ ರುಚಿಯಂತಿದ್ದಿತು***
***ನನೆಯೊಳಗಣ ಪರಿಮಳದಂತಿದ್ದಿತು***
***ಕೂಡಲಸಂಗಮ ದೇವರ ನಿಲುವು ಕನ್ಯೆಯ ಸ್ನೇಹದಂತಿದ್ದಿತು***

ನೀರು, ಸಸಿ, ನನೆ ಕನ್ಯೆ ಇವುಗಳಲ್ಲಿ ಕ್ರಮವಾಗಿ ಕಿಚ್ಚು, ರುಚಿ, ಕಂಪು, ನೇಹಗಳಿರುವಂತೆ ಪವಿತ್ರಾತ್ಮನಿರುವುದಾಗಿ ಹೇಳುತ್ತಾರೆ.

**ಮನುಷ್ಯರ ಮನಸ್ಸಿನ ಚಂಚಲತೆಗೆ ಆಸೆ ಆಮಿಷಗಳಿಗೆ ಬಳಸಿದ ಪ್ರಾಣಿ ಪಕ್ಷಿ ರೂಪಕಗಳು**

- ಅಂದಣವನೇರಿದ ಸೊಣಗನಂತೆ ಕಂಡೊಡೆ ಬಿಡದು ಮುನ್ನಿನ ಸ್ವಭಾವವನ್ನು
- ಕೊಂಬಿನ ಮೇಲಣ ಮರ್ಕಟನಂತೆ ಲಂಘಿಸುವುದೆನ್ನ ಮನ
- ತುಪ್ಪದ ಸವಿಗೆ ಅಲಗನೆಕ್ಕುವ ಸೊಣಗನಂತೆನ್ನ ಬಾಳುವೆ
- ಬೆಲ್ಲವ ತಿಂದ ಕೋಡಗದಂತೆ ನೆನೆಯದಿರ ಮನವೇ
- ಕಂಬಳಿಯಲ್ಲಿ ಕಣಕವ ನಾದಿದಂತೆ ಕಾಣಿರೆ ಎನ್ನ ಮನ
- ಹಾವಿನಬಾಯ ಕಪ್ಪೆ ಹಾರುವ ನೊಣಕ್ಕೆ ಆಶೆ ಮಾಡಿದಂತೆ
- ಓತಿ ಬೇಲಿವರೆದಂತೆ ಎನ್ನ ಮನವಯ್ಯ
- ಹೊತ್ತಿಗೊಂದು ಪರಿಯಪ್ಪ ಗೋಸುಂಬೆ ಯಂತೆನ್ನ ಮನವು
- ಬಾವುಲ ಬಾಳುವೆಯಂತೆನ್ನ ಮನವು
- ಎನ್ನ ಚಿತ್ತವು ಹತ್ತಿಯ ಹಣ್ಣು ನೋಡಯ್ಯ
- ತೆರಣಿಯ ಹುಳು ತನ್ನ ಸ್ನೇಹದಿಂದ ಮನೆಯ ಮಾಡಿ.

ಹೀಗೆ ಮನುಷ್ಯನ ಮನಸ್ಸು ನಾಯಿಯಂತೆ, ಮರ್ಕಟನಂತೆ, ಓತಿಕಾಟ, ಗೋಸುಂಬೆ, ಬಾವುಲಿ, ಸರ್ಪಗಳಂತೆ ಎಂಬುದಾಗಿ ರೂಪಿಸಿದ್ದಾರೆ. ಮರ್ಕಟ ಬಹು ಚಂಚಲ ಸ್ವಭಾವದ್ದು ನಿಂತಲ್ಲಿ ನಿಲ್ಲದು ಕುಳಿತಲ್ಲಿ ಕುಳ್ಳಿರದು ವಿವೇಕರಹಿತವಾಗಿ ಲಂಘಿಸುವುದು ಅಂತೆಯೇ ನನ್ನ ಮನಸ್ಸು ಎಂದಿರುವರು.

*ಎನ್ನ ಮನವೆಂಬ ಮರ್ಕಟನು*
*ತನುವಿಕಾರವೆಂಬ ಅಲ್ಪಸುಖದಾಸೆ ಮಾಡಿ*
*ವೃಥಾ ಭ್ರಮಣಗೊಂಡು ನಾನಾದೆಸೆಗೆ ಲಂಘಿಸಿ*
*ಅಳಲಿಸಿ, ಬಳಲಿಸುತ್ತಿದೆ ನೋಡಾ*

ಇಲ್ಲಿ ಕೋತಿಯ ರೂಪಕ ಮನದ ಚಂಚಲತೆಗೆ ಹಿಡಿದ ಕನ್ನಡಿಯಂತಿದೆ. ನಾಯಿಯೊಂದನ್ನು ಪಲ್ಲಕ್ಕಿಯಲ್ಲಿ ಕೂಡಿಸಿ ಮೆರವಣಿಗೆ ಮಾಡಿದರು ಸಹಿತ ದಾರಿಯಲ್ಲಿ ಎಲ್ಲಿಯೋ ಒಂದು ಎಲುಬಿನ ಚೂರು ಬಿದ್ದುದನ್ನು ಕಂಡರೂ ತಾನು ಎಲ್ಲಿರುವೆನೆಂಬುದನ್ನು ಮರೆತು, ಚಂಗನೇ ಜಿಗಿದು ಓಡುತ್ತದೆ. ಅಂತೆಯೇ ನನ್ನ ಮನಸ್ಸು .ಅಂದರೆ ಮನುಷ್ಯ ತಾನು ಎಷ್ಟೇ ಎತ್ತರಕ್ಕೇರಿದರೂ, ಉನ್ನತ ಸ್ಥಾನದಲ್ಲಿದ್ದರೂ ತನ್ನ ಮೋಹ, ಮದ,ಮತ್ಸರ, ಅಹಂಕಾರ ಮುಂತಾದ ದುರ್ಗಣಗಳನ್ನು ಸುಲಭವಾಗಿ ಬಿಡುವುದಿಲ್ಲ. ಮುಂದುವರಿದು ನೋಡಲಾಗಿ

*ತುಪ್ಪದ ಸವಿಗೆ ಅಲಗ ನೆಕ್ಕುವ ಸೊಣಗನಂತೆನ್ನ ಬಾಳುವೆ*
*ಸಂಸಾರ ಸಂಗವ ಬಿಡದು ನೋಡಣ್ಣ ಮನವು*
*ಈ ನಾಯಿತನವ ಮಾಣಿಸು*

ಎಂಬಲ್ಲಿ ತುಕ್ಕು ಹಿಡಿಯದಿರಲೆಂದು ತುಪ್ಪವನ್ನು ಸವರಿದ ಅಲಗನ್ನು ನಾಯಿ ಬಿಡುವುದಿಲ್ಲ ಅದನ್ನೇ ನೆಕ್ಕುತ್ತದೆ. ಅದರಿಂದ ತನ್ನ ನಾಲಿಗೆ ಕತ್ತರಿಸಿ ಅದರಿಂದ ರಕ್ತ ಬಂದರೂ ಅದರ ಪರಿವೆಯೇ ಇಲ್ಲದೆ ಇರುವುದು ಮನುಷ್ಯನ ರಕ್ತಗತ ಆಸೆ ಆಕಾಂಕ್ಷೆಗಳಿಗೆ ಹಿಡಿದ ಕನ್ನಡಿಯಂತಿದೆ.

*ಓತಿ ಬೇಲಿವರಿದಂತೆ ಎನ್ನ ಮನವಯ್ಯ*
*ಹೊತ್ತಿಗೊಂದು ಪರಿಯಪ್ಪ ಗೋಸುಂಬೆಯಂತೆನ್ನ ಮನವು*
*ಬಾವುಲ ಬಾಳುವೆಯಂತೆನ್ನ ಮನವು*
*ನಡುವಿರುಳೊಳೆದ್ದ ಕುರುಡಂಗೆ ಅಗಸೆಯಲ್ಲಿ ಬೆಳಗಾದಂತೆ*
*ನಾನಿಲ್ಲದ ಭಕ್ತಿಯ ಬಯಸಿದರುಂಟೆ ಕೂಡಲ ಸಂಗಮದೇವ.*

ಬೇಲಿಯಲ್ಲಿರುವ ಓತಿಕಾಟ ಯಾರನ್ನೋ ಕರೆಯುವಂತೆ ತಲೆ ಹಾಕುತ್ತಿರುತ್ತದೆ ಹಾಗೆಂದು ತಿಳಿದು ತನ್ನ ಕಡೆ ಯಾರಾದರೂ ಬಂದರೆ

ಓಡಿಹೋಗಿ ಬೇಲಿಯನ್ನು ಸೇರಿಕೊಳ್ಳುತ್ತದೆ. ನನ್ನ ಮನಸ್ಸು ಸಹ ಇಂಥ ವಿಷಯ ವ್ಯಾಮೋಹಕ್ಕೆ ಒಳಗಾಗಿದೆ.

ಒಂದು ದಿನದಲ್ಲಿ ಹಲವು ಸಾರೆ ಬಣ್ಣ ಬದಲಿಸುವ ಗೋಸುಂಬೆಯು ಓತಿಕಾಟದ ಜಾತಿಗೆ ಸೇರುವಂತದ್ದು ಗೋಸುಂಬೆ ಬಣ್ಣ ಬದಲಿಸುವಂತೆ ಮನುಷ್ಯನು ಸಹಿತ ಒಳ್ಳೆಯವ –ಕೆಟ್ಟವ, ಜ್ಞಾನಿ –ಅಜ್ಞಾನಿ, ವ್ಯಾಮೋಹಿ– ನಿರ್ಮೋಹಿ, ಸುಗುಣಿ–ದುರ್ಗುಣಿ, ಕೋಪಿಷ್ಟ–ರಸಿಕ, ಶಾಂತ–ಸಮಾಧಾನಿ ಹೀಗೆ ಹತ್ತು ಹಲವು ಗುಣಗಳನ್ನು ಹೊಂದಿದ್ದು ತನಗೆ ಬೇಕಾದಂತೆ ವರ್ತಿಸುತ್ತಾನೆ. ಇನ್ನು ಬಾವುಲ ಬಾಳುವೆಯಂತೆನ್ನ ಮನ ಎಂಬಲ್ಲಿ ಬಾವುಲಿಗೆ ಒಂದೇ ಬಾಯಿ (ದ್ವಾರ) ಇರುತ್ತದೆ ತಿನ್ನುವುದಕ್ಕೂ ಮಲತ್ರಯಗಳನ್ನು ಹೊರ ಹಾಕುವುದಕ್ಕೂ ಅದೇ ದ್ವಾರವನ್ನು ಬಳಸುತ್ತದೆ, ಹಾಗೆ ಮನುಷ್ಯನು ಸಹಿತ ಒಳ್ಳೆಯ ಮಾತುಗಳನ್ನು ಆಡುತ್ತಾನೆ. ಬೆನ್ನ ಹಿಂದೆಯೇ ಕೆಟ್ಟ ಕೆಲಸಗಳನ್ನು ಮಾಡುತ್ತಾನೆ .ದಾನ ಧರ್ಮಗಳನ್ನು ಮಾಡುವ ಮೂಲಕ ಪುಣ್ಯ ಸಂಪಾದಿಸುತ್ತಾನೆ. ಜೊತೆಗೆ ಮೋಸ ವಂಚನೆ ದ್ವೇಷಗಳನ್ನು ಸಾಧಿಸುತ್ತಾನೆ. ಹೀಗೆ ಒಳ್ಳೆಯದನ್ನು ಕೆಟ್ಟದ್ದನ್ನು ಮಾಡುತ್ತಾನೆ.

**ಮನಸ್ಸಿನ ಭಯಂಕರತೆಗೆ ಸರ್ಪವನ್ನು ಹೋಲಿಸಿದ್ದಾರೆ.**

***ಮನವೇ ಸರ್ಪ ತನುವೇ ಹೇಳಿಗೆ***

***ಹಾವಿನೊಡತಣ ಹುದುವಾಳಿಗೆ***

***ಇನ್ನಾವಾಗ ಕೊಂದುಹುದೆಂದರಿಯೆ***

***ಇನ್ನಾವಾಗ ತಿಂದಹುದೆಂದರಿಯೆ***

***ನಿಚ್ಚಕ್ಕೆ ನಿಮ್ಮ ಪೂಜಿಸಬಲ್ಲಡೆ***

***ಅದೇ ಗರುಡ ಕೂಡಲಸಂಗಮದೇವ***

ಸರ್ಪ ವಿಷದ ಸಂಕೇತ. ಹನ್ನೆರಡು ವರ್ಷವಾದರೂ ದ್ವೇಷ ಸಾಧಿಸುವಂಥದ್ದು, ಹಾಗೆಯೇ ನನ್ನ ಮನಸ್ಸು ಸರ್ಪದಂತೆ. ನನ್ನ ದೇಹವೇ ಈ ಸರ್ಪದ ವಾಸಸ್ಥಾನ. ಸಂಸಾರ ವ್ಯಾಮೋಹವೆಂಬ ಸರ್ಪದ ಜೊತೆಗೆ ನನ್ನ ಜೀವನ ಯಾವಾಗ ವಿಷಕಾರುತ್ತದೋ ಯಾವಾಗ ಸಾಯುತ್ತೇನೋ ಎಲ್ಲವೂ ಅನಿಶ್ಚಿತ ಇದಕ್ಕೆ ಉಪಾಯವೆಂದರೆ ಶಿವಪೂಜೆಯ ನಿತ್ಯ ಕಾಯಕ ಎಂದಿರುವರು.

**ಮಾನವರ ಬೂಟಾಟಿಕೆ– ಢಂಬಾಚಾರ– ವ್ಯರ್ಥ ಪ್ರಯತ್ನಕ್ಕೆ ಬಳಸಿದ ರೂಪಕಗಳು**

- ಗಗನವಡರಿದ ಕಾಗೆ ಎಂತಾದೆನಯ್ಯ,
- ಹುತ್ತವ ಬಡಿದಡೆ ಹಾವು ಸಾಯಬಲ್ಲದೆ.
- ಕಪ್ಪೆ ಸರ್ಪನ ನೆರಳಲ್ಲಿಪ್ಪಂತೆ,
- ಮಿಂಬುಲಿಗನ ಹಕ್ಕಿಯಂತೆ,
- ಮಠದೊಳಗಣ ಬೆಕ್ಕು ಇಲಿಯಂ ಕಂಡು ಪುಟನೆಗದಂತೆ.

ಎಂಬಲ್ಲಿ ದೇಹದಂಡನೆಯಿಂದ ಪ್ರಯೋಜನವಿಲ್ಲ ಅಂತರಂಗ ಶುದ್ಧವಾಗಿರಬೇಕು ಎಂದಿದ್ದಾರೆ.

***ಕಬ್ಬಿಣದ ಕೋಡಗವ ಪರುಷ ಮುಟ್ಟಲು***

***ಹೊನ್ನಾದರೇನು, ಮತ್ತೇನಾದರೇನು***

***ತನ್ನ ಮುನ್ನಿನ ರೂಪ ಬಿಡದನ್ನಕ್ಕ***

ಅಂದರೆ ವ್ಯಕ್ತಿಯ ಬಾಹ್ಯ ಸೌಂದರ್ಯಕ್ಕಿಂತ ಅಂತರಂಗದ ಶುದ್ದಿ, ಅಂತರಂಗದ ಪರಿವರ್ತನೆ ಮುಖ್ಯವಾಗುತ್ತದೆ. ಇಲ್ಲವಾದಲ್ಲಿ ಅದು ವ್ಯರ್ಥ ಪ್ರಯತ್ನವಾಗುತ್ತದೆ ಹುತ್ತವ ಬಡಿದರೆ ಹಾವು ಸಾಯಬಲ್ಲದೆ ಎಂಬಲ್ಲಿ ಹಾವಿನ ವಶಪಡಿಸಿಕೊಳ್ಳುವಿಕೆಗೆ ಜಾಣತನ, ವಿವೇಕ ಭಗವಂತನ ಸ್ಮರಣೆ, ಬೇಕೇ ಹೊರತು ದೇಹದಂಡನೆಯಲ್ಲ ಎಂದಿರುವರು.

**ಗಾದೆಗಳ ಬಳಸುವಿಕೆಯಲ್ಲಿ ಬಳಸಿದ ರೂಪಕಗಳು**

ಭಾಷೆಯ ತವನಿಧಿಯಂತಿರುವ ಗಾದೆಗಳ ರೂಪಕಗಳನ್ನು ಬಳಸಿಕೊಂಡು ವಚನಗಳಿಗೆ ಸಂಕ್ಷಿಪ್ತತೆಯನ್ನು ತಂದುಕೊಟ್ಟಿದ್ದಾರೆ. ಜೊತೆಗೆ ವಚನಕಾರರ ಸಾಮಾಜಿಕ ಪ್ರಜ್ಞೆಯ ದರ್ಶನ ಮಾಡಿಸಿದ್ದಾರೆ.

- ಕತ್ತೆ ಬಲ್ಲುದೆ ಕತ್ತುರಿಯ ವಾಸನೆಯ,
- ಎಮ್ಮೆಗೊಂದು ಚಿಂತೆ ಸಮ್ಮಗಾರನಿಗೊಂದು ಚಿಂತೆ,
- ಕರಿಯು ಕನ್ನಡಿಯೊಳಗಡಗಿದಂತೆ,
- ಹೊರಿಸಿಕೊಂಡು ಹೋದ ನಾಯಿ ಮೊಲವನೇನ ಹಿಡಿಯುವುದಯ್ಯ,
- ನಾಯಹಾಲು ನಾಯಿಗಲ್ಲದೆ ಪಂಚಾಮೃತಕ್ಕೆ ಸಲ್ಲದಯ್ಯ,
- ಹೊನ್ನಹುಳವ ಕಂಡು ನರಿಬಾಲವ ಹುಣ್ಣು ಮಾಡಿಕೊಂಡಂತೆ,
- ಮರ್ಕಟನ ಕೈಯಲ್ಲಿ ಮಾಣಿಕ್ಯವಿದ್ದು ಫಲವೇನುಹಂದೆಯ ಕೈಯಲ್ಲಿ ಚಂದ್ರಾಯುಧವಿದ್ದು ಫಲವೇನು,
- ಕೆಚ್ಚಲ ಕಚ್ಚಿದ ಉಣ್ಣೆಬಲ್ಲುದೆ ಕ್ಷೀರ ರುಚಿಯ,
- ಕಾಗೆಯ ಮರಿ ಕೋಗಿಲೆಯಾಗಬಲ್ಲದೆ,
- ಹಬ್ಬಕ್ಕೆ ತಂದ ಹರಕೆಯ ಕುರಿ ತೋರಣಕ್ಕೆ ತಂದ ತಳಿರ ಮೇದಂತೆ

ಹೀಗೆ ಗಾದೆಗಳನ್ನು ಬಳಸುವಾಗ ಕೆಲವನ್ನು ಬದಲಾವಣೆ ಮಾಡಿಕೊಂಡಿದ್ದಾರೆ. ರೂಪದಲ್ಲಿ, ಅರ್ಥದಲ್ಲಿ, ಇನ್ನು ಕೆಲವನ್ನು ಇದ್ದಕ್ಕಿದ್ದಂತೆ ಬಳಸಿಕೊಂಡಿದ್ದಾರೆ .ಕೆಲವನ್ನು ಹೊಸದಾಗಿ ಸೃಷ್ಟಿಸುವ ಮೂಲಕ ಸ್ವಂತಿಕೆಯನ್ನು ಮೆರೆದಿದ್ದಾರೆ .ಈ ಮೂಲಕ ವಚನಗಳ ಅರ್ಥವಂತಿಕೆಯನ್ನು ಹೆಚ್ಚಿಸುವುದು ಮಾತ್ರವಲ್ಲದೆ ವಚನಗಳಿಗೆ ಹೊಸ ಆಯಾಮ ನೀಡಿದ್ದಾರೆ.

ಕಾಗೆ ಮತ್ತು ಕೋಳಿಗಳ ರೂಪಕಗಳನ್ನು ಬಳಸುವ ಮೂಲಕ ಸಮಾಜದಲ್ಲಿ ಎಲ್ಲರೂ ಒಟ್ಟಾಗಿ ಸಾಮರಸ್ಯದಿಂದ ಬಾಳಿದರೆ ನೆಮ್ಮದಿ.

ಎಲ್ಲವೂ ಎಲ್ಲರಿಂದ ಎಲ್ಲರಿಗಾಗಿ ಎಂಬ ಸರ್ವೋದಯ ಸಮಾಜದ ಬೀಜ ಮಂತ್ರವನ್ನು ಸಮಾಜದಲ್ಲಿ ಬೇರೂರುವ ಅವಶ್ಯಕತೆಯನ್ನು ಹೀಗೆ ಹೇಳಿದ್ದಾರೆ. “ಕಾಗೆಯೊಂದಗುಳ ಕಂಡರೆ ಕೂಗಿ ಕರೆಯದೆ ತನ್ನ ಬಳಗವ, ಕೋಳಿಯೊಂದು ಕುಟುಕ ಕಂಡರೆ ಕೂಗಿ ಕರೆಯದೆ ತನ್ನ ಕುಲವನೆಲ್ಲವ” ಎಂಬಲ್ಲಿ ಪ್ರಾಣಿಗಳಲ್ಲಿ ಕಂಡುಬರುವ ಈ ಸಹಕಾರ ಮನೋಧರ್ಮ, ಅನುಕಂಪ, ಸುಖದುಃಖಭಾಗಿತ್ವ ಮಾನವಕುಲಕ್ಕೆ ಅನುಕರಣೀಯವಾಗಿವೆ.

ರೂಪಕಗಳು ಕವಿಸಾಮರ್ಥ್ಯದ ನಿಕ್ಷೇಪಗಳೆಂದೇ ಹೇಳುತ್ತೇವೆ. ಕಾವ್ಯಸೌಂದರ್ಯ ಹೆಚ್ಚಿಸಲು, ಅನುಭವವನ್ನು ಗಟ್ಟಿಗೊಳಿಸಲು, ಭಾವವನ್ನು ಹದಗೊಳಿಸಲು ರೂಪಕಗಳು ಬಹಳ ಸಹಕಾರಿಯಾಗಿವೆ. ಇಂತಹ ರೂಪಕಗಳನ್ನು ವಚನಗಳಲ್ಲಿ ಬಳಸುವ ಮೂಲಕ ಜನಸಾಮಾನ್ಯರನ್ನು ಆಕರ್ಷಿಸುವ ಗುಣ ವಚನಗಳಲ್ಲಿದೆ. ಶರಣರ ಅದ್ಭುತ ಕಲ್ಪನಾಶಕ್ತಿ, ಪ್ರಕೃತಿಪ್ರೇಮ, ಕವಿತ್ವಗುಣಗಳು ಅವರು ಬಳಸಿದ ರೂಪಕಗಳಲ್ಲಿ ಒಡಮೂಡಿವೆ. ಕೆಲವು ಕಡೆ ಶರಣರ ವೈಚಾರಿಕ ವೈಜ್ಞಾನಿಕ ಮನೋಭಾವಗಳು ಎದ್ದು ಕಾಣುತ್ತವೆ. ವಚನಗಳ ಓದು ಓದುಗರ ಬುದ್ಧಿಗೆ ಕಸರತ್ತನ್ನು ನೀಡಿದೆ. ಪ್ರಕೃತಿ–ಪ್ರಾಣಿ–ಪಕ್ಷಿಗಳ ರೂಪಕಗಳು ವಚನ ಸಾಹಿತ್ಯಕ್ಕೆ ಸತ್ವದ ಜೊತೆಗೆ ಸೊಬಗನ್ನು ತಂದುಕೊಟ್ಟಿವೆ. ಶರಣರ ಸಾಮಾಜಿಕ ಪ್ರಜ್ಞೆಗೆ ಹಿಡಿದ ಕನ್ನಡಿಯಂತಿವೆ.

ಜೇಡರ ದಾಸಿಮಯ್ಯ, ಅಕ್ಕಮಹಾದೇವಿ, ಅಲ್ಲಮಪ್ರಭು, ಬಸವಣ್ಣ, ಚೆನ್ನಬಸವಣ್ಣ, ಮಡಿವಾಳ ಮಾಚಯ್ಯ ಮುಂತಾದ ಶರಣರು ಬಳಸಿದ ರೂಪಕಗಳು ಬಹುಜನಪ್ರಿಯಗೊಂಡಿವೆ. ಬಸವಣ್ಣನವರಂತೂ ಕೆಲವು ಕಡೆ ಒಬ್ಬ ಮನೋವಿಜ್ಞಾನಿಯಂತೆ, ಮನ:ಪರಿವರ್ತನಕಾರರಂತೆ ತಮ್ಮ ಅಂತರಂಗದ ಅನೇಕ ಪ್ರವೃತ್ತಿಗಳನ್ನು ಪ್ರಾಣಿ ರೂಪಕಗಳಲ್ಲಿ ಹೇಳಿಕೊಂಡಿದ್ದಾರೆ. ಕಾಗೆ, ಕೋಳಿಗಳ ರೂಪಕಗಳಂತೂ ಮನುಷ್ಯರಿಗೆ ಅನುಕರಣೆಯವಾಗಿವೆ, ಮಾದರಿಯೆನಿಸಿವೆ. ಹೀಗೆ ಅನೇಕ ರೂಪಕಗಳ ಸೃಷ್ಟಿಕಾರರಾದ ಬಸವಣ್ಣನವರನ್ನು ಕುರಿತಾಗಿ ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪನವರು ಹೇಳುವಂತೆ ಷಟ್ಪದಿಗೆ

ಕುಮಾರವ್ಯಾಸ ನಿರುವಂತೆ, ವಚನ ಸಾಹಿತ್ಯಕ್ಕೆ ಬಸವಣ್ಣ ಎಂದಿರುವುದು ಮಾತ್ರವಲ್ಲ ಕನ್ನಡ ಸಾಹಿತ್ಯದಲ್ಲಿ ನಾರಣಪ್ಪ, ಬಸವೇಶ್ವರ ಇವರಿಬ್ಬರ ಹಾಗೆ ಭಾಷೆಯ ಸಾಧ್ಯತೆಯನ್ನು ಸೂರೆಗೊಂಡವರು ಹಾಗೂ ರೂಪಕ ನಿರ್ಮಾಣ ಮಾಡಿದವರು ವಿರಳ ಎಂದೇ ಹೇಳಬೇಕು ಎಂದಿರುವ ಮಾತು ಅಕ್ಷರಶ: ಸತ್ಯವಾಗಿದೆ.

**ಪರಾಮರ್ಶನ ಗ್ರಂಥಗಳು**


- ಗೋವಿಂದರಾಜು, ಟಿ. (2018). ಜಾನಪದ ಸಂಶೋಧನೆಯ ಹೊಸ ಸಾಧ್ಯತೆಗಳು. ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ.
- ನಾರಾಯಣ ಪಿ.ವಿ. (2016). *ವಚನ ಸಾಹಿತ್ಯ ಒಂದು ಸಾಂಸ್ಕೃತಿಕ ಅಧ್ಯಯನ.* (1983). ವೀರಶೈವ ಅಧ್ಯಯನ ಸಂಸ್ಥೆ
- ನಾವಲಗಿ. ಸಿ ಕೆ. (2000). ವಚನ ಸಾಹಿತ್ಯದಲ್ಲಿ ಜಾನಪದ ಅಂಶಗಳು ಒಂದು ಅಧ್ಯಯನ.
- ಶ್ರೀ ಮುರುಘಾಮಠ. (2013). *ಯುಗ ಯುಗದ ಉತ್ಸಾಹ.* ಧಾರವಾಡ.
- ವೀರಣ್ಣ ರಾಜೂರ ಮತ್ತು ಶ್ರೀ ಬಸವರಾಜ ಹೂಗಾರ. (2010). *ವಚನಗಳಲ್ಲಿ ವಿಜ್ಞಾನ.* ಶ್ರೀ ಬಸವೇಶ್ವರ ಪೀಠ. ಕರ್ನಾಟಕ ವಿಶ್ವವಿದ್ಯಾಲಯ.
- ಮುಗಳಿ, ರಂ. ಶ್ರೀ. (2007). *ಕನ್ನಡ ಸಾಹಿತ್ಯ ಚರಿತ್ರೆ.* ಗೀತಾ ಬುಕ್ ಹೌಸ್.
- ವಚನ ಸಾಹಿತ್ಯ ಹಾಗೂ ಪರಿಸರ ಪ್ರಜ್ಞೆ ಮತ್ತು UN's Sustainable Goals of Environment. (2024, ಜೂನ್ 26). Vachanamandara.in.